# ಕಣ್ಣಿಗೆ ನಿಷ್ಠವಾದ ವಿಜ್ಞಾನ

ಗಾಂಧೀಜಿ ಆಗ ದಕ್ಷಿಣ ಆಫ್ರಿಕಾದಲ್ಲಿದ್ದರು. ಭಾರತದ ರಾಜಕೀಯದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಇನ್ನೂ ಸಕ್ರಿಯವಾಗಿ ತೊಡಗಿರಲಿಲ್ಲ. ಆಫ್ರಿಕಾದಲ್ಲಿದ್ದುಕೊಂಡೇ ಅಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದರು. ಅಂಥದೊಂದು ಸಂದರ್ಭದಲ್ಲಿ ಹಡಗಿನಲ್ಲಿ ಅವರು ಭಾರತಕ್ಕೆ ಬರುವವರಿದ್ದರು. ಗಾಂಧಿ ಆಗಲೇ ಸ್ವಲ್ಪಮಟ್ಟಿಗೆ ಪ್ರಸಿದ್ಧರಾಗಿದ್ದರು. ಹಡಗಿನಲ್ಲಿ ಗಾಂಧೀಜಿಯವರ ಸಹ–ಪ್ರಯಾಣಿಕ ನೋರ್ವ–ಪ್ರಾಯಃ ಬ್ರಿಟಿಷ್ ಪ್ರಜೆ– ಗಾಂಧಿ ಅವರನ್ನು ನೋಡಲು ಬಂದ. ಅವನ ಕೈಯಲ್ಲಿ ಮಧ್ಯಮಗಾತ್ರದ ದೂರದರ್ಶಕ **Teliscope** ಒಂದಿತ್ತು! ಆತ, ದೂರದರ್ಶಕ ಯಂತ್ರದ ಕುರಿತು ಬಹು ಮೆಚ್ಚುಗೆಯ ಮಾತುಗಳನ್ನಾಡುತ್ತ, ದೂರದ ದಿಗ್ದಿಗಂತಗಳನ್ನು ಈ ಯಂತ್ರದ ಮೂಲಕ ನಿಚ್ಚಳವಾಗಿ ನೋಡಲಾಗುತ್ತದೆ; ಇದೊಂದು ದೊಡ್ಡ ಶೋಧ, ಇದರಿಂದ ಮುಂದಿನ ದಿನಗಳಲ್ಲಿ ದೊಡ್ಡ ಕ್ರಾಂತಿಯೇ ಆಗಲಿದೆ. ವಿಜ್ಞಾನವೇ ನಮ್ಮ ಮುಖ್ಯ ಕಾಳಜಿಯಾಗಲಿದೆ– ಎಂದೆಲ್ಲ ಹೇಳಿದ. ಪ್ರಾಯಃ ಸರಿಯಾಗಿಯೇ ಹೇಳಿದ. ಒಮ್ಮೆ ಈ ದೂರದರ್ಶಕದಲ್ಲಿ ದೂರ–ದಿಗಂತಗಳನ್ನು ನೋಡಿ ಎಂದು ಗಾಂಧಿಯವರಿಗೆ ಕರೆ ನೀಡಿದ.

ವಿಜ್ಞಾನವಿಲ್ಲದೆ ಜೀವನವಿಲ್ಲ. ವಿಜ್ಞಾನ ಪಶ್ಚಿಮ ದೇಶಗಳಲ್ಲಿ ತೀವ್ರವಾಗಿ ಬೆಳೆಯುತ್ತಿದೆ. ಪಶ್ಚಿಮದ ಕೊಡುಗೆ ಈ ದಿಕ್ಕಿನಲ್ಲಿ ಅಪಾರ. ಇದೆಲ್ಲವನ್ನೂ ಅರ್ಥ ಮಾಡಿಕೊಂಡರೆ, ಭಾರತದಂಥ ದೇಶಗಳಿಗೆ ಇಂಗ್ಲೆಂಡ್ ಮಾದರಿ ಆಗಬಹುದೆಂದು, ಇಂಗ್ಲೆಂಡಿನ ವಿರುದ್ಧ ಹೋರಾಡುವುದು ಅರ್ಥಹೀನವೆಂದು– ಆಫ್ರಿಕಾದಲ್ಲೇ ಗಾಂಧೀಜಿ ಇಂಗ್ಲೆಂಡಿನ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತಿದ್ದರಲ್ಲ– ಗಾಂಧಿ ಮನಗಾಣಬಹುದು ಎಂಬ ಇಂಗಿತ ಕೂಡ ಈ ಪ್ರಯಾಣಿಕನಲ್ಲಿ ಇದ್ದಿರಬಹುದು!

ಆದರೆ ಗಾಂಧಿ ಹೇಳಿದ ಉತ್ತರ ಮಾತ್ರ ಅವನಿಗೆ ಅನಿರೀಕ್ಷಿತವಾಗಿತ್ತು. ಎಂಥವರಿಗೂ ಅದು ಅನೂಹ್ಯವಾಗಿತ್ತು. ಗಾಂಧಿ ಹೇಳಿದರು: ದೂರ ದಿಗಂತದಲ್ಲಿ ಏನಿದೆ ಎಂದು ಬಹಳ ದೂರ ನೋಡುವ ಕುತೂಹಲವೇ ನನಗಿಲ್ಲ. ನನ್ನ ಕಣ್ಣುಗಳಿಂದ ನನಗೇನು ನೋಡಲಾಗುತ್ತದೆಯೋ ಈ ನೋಟದ ಅರ್ಥಪೂರ್ಣತೆಯೇ ನನಗೆ ಸಾಕು. ನನ್ನ ಸಮೀಪದಲ್ಲಿ ಏನೆಲ್ಲ ಇವೆ ಇವುಗಳ ಅರ್ಥವಂತಿಕೆಯನ್ನೇ ಇನ್ನೂ ಪೂರ್ತಿಯಾಗಿ ತಿಳಿಯಲಾಗಿಲ್ಲ. ಇನ್ನು ದೂರದಲ್ಲಿರುವುದನ್ನು ನೋಡಿ ನಾನೇನು ಪಡೆಯಲಿಕ್ಕಿದೆ? **My friend, sorry I am not inrerested at all** ಎಂದರಂತೆ.

ಗಾಂಧೀಜಿ, ವಿಜ್ಞಾನಕ್ಕೆ ಆಪಾದಮಸ್ತಕ ವಿರೋಧಿಗಳಾಗಿರಲಿಲ್ಲ. ಅವರ ಇಂಗಿತವೇನೆಂದರೆ, ಗಾಂಧಿಗೆ ಬೇಕಾಗಿದ್ದುದು ಕನ್ನಡಕವೇ ಹೊರತು ದೂರದರ್ಶಕವಲ್ಲ. ಹೌದು; ದೃಷ್ಟಿಗೆ ದೋಷಗಳು ಉಂಟಾಗುವುದು ಸ್ವಾಭಾವಿಕ. ಆ ದೋಷಗಳನ್ನು ನಿವಾರಿಸಿ ಮೊದಲಿನಂತೆ, ಕಣ್ಣಿಂದ ನೋಡಲಾಗುವಂತೆ ಮಾಡುವ ವಿಜ್ಞಾನ ಬೇಕು. ಅದು ಸಾಕು. ಅದು ಪರ್ಯಾಪ್ತ. ಅದು ಕಣ್ಣಿಗೆ ನಿಷ್ಠವಾದ ವಿಜ್ಞಾನ. ಅಂದರೆ ಮಾನುಷಾನುಭವಕ್ಕೆ ನಿಷ್ಠವಾದ ವಿಜ್ಞಾನ. ಇದೊಂದು 'ಮಿತಿ' ಎನಿಸಬಹುದು. ಮಿತಿಯೇ ಆಗಿರಬಹುದು. ಆದರೆ ಈ ಮಿತಿಯನ್ನು ಮೀರಬೇಕಿಲ್ಲ. ನಿಸರ್ಗದ ಜೀವರಾಶಿಗಳಿಗೆಲ್ಲ ಒಂದೊಂದು ಶಕ್ತಿ ಇದೆ. ಒಂದು ಮಿತಿಯೂ ಇದೆ. ಅದು ನಿಸರ್ಗವೇ ಇಟ್ಟ ಮಿತಿ. ಜೀವದ ಬಾಳಿಗೆ ಈ ಮಿತಿ ಅಗತ್ಯ ಎಂದೇ ನಿಸರ್ಗ ಈ ಮಿತಿಯನ್ನಿಟ್ಟದೆ. ಮಿತಿಯೊಳಗಿನ ಬಾಳಿನ ಚೆಲುವನ್ನು ಅನುಭವಿಸುವ ಸಂಯಮವನ್ನು ನಾವು ಕಲಿಯಬೇಕಿದೆ. ಹೌದು; ಇದು 'ಮಿತಿ' ಎನ್ನುವ ತಿಳಿವಳಿಕೆಯು ಮಿತಿಯನ್ನು ಮೀರುವ ಹಂಬಲವಾಗಿ ಮಾರ್ಪಡಬಹುದು. ಆದರೆ ಮಾರ್ಪಡಬೇಕಿಲ್ಲ. 'ಮಿತಿ' ಎನ್ನುವ ತಿಳಿವಳಿಕೆಯು ಮಿತಿಯನ್ನು ಒಪ್ಪುವ ಸಂಯಮವಾಗಿಯೂ ಬೆಳೆಯಬಹುದು. ಜೀವರಾಶಿಗಳೆಲ್ಲ ಈ ಮಿತಿಯನ್ನೊಪ್ಪಿವೆ. ಅವುಗಳ ಬದುಕಿನ ಚೆಲುವಿಗೆ ಇದೇ ಕಾರಣ. ನಿಸರ್ಗವನ್ನು ನೋಡುತ್ತ ನಾವು ಆನಂದ ಪಡೆಯುತ್ತೇವಾದರೆ, ಆ ಆನಂದವು ಮಿತಿಯೊಳಗಿನ ಬದುಕನ್ನು ನೋಡಿಯೇ ಪಡೆದ ಆನಂದವಾಗಿದೆ! ನಾವು ಜನ–ಸಾಮಾನ್ಯರು ಎನ್ನುತ್ತೇವಲ್ಲ, ಮಹತ್ವಾಕಾಂಕ್ಷೆ ಇಲ್ಲದ ಮಂದಿ ಎನ್ನುತ್ತೇವಲ್ಲ– ಇವರೆಲ್ಲ, ತಿಳಿದೋ ತಿಳಿಯದೆಯೋ– ಮಿತಿಯೊಳಗಿನ ಚೆಲುವನ್ನು ಅನುಭವಿಸುತ್ತಲೇ ಇರುವವರು; ಎಲ್ಲ ಅರಕೆಗಳ ನಡುವೆಯೂ. ಈ ಆನಂದವನ್ನು ಬಲಿಗೊಟ್ಟು ನಾವು ಪಡೆಯುವುದಾದರೂ ಏನನ್ನು?

ವಿಜ್ಞಾನಕ್ಕೆ ಇನ್ನೊಂದು ಮುಖವಿದೆ. ದೂರದಲ್ಲಿರುವುದೇನು ಎಂದು ನೋಡಬೇಕೆನ್ನುವ ಕುತೂಹಲವೂ ಕೂಡ ಪ್ರಕೃತಿ ಸಹಜವಲ್ಲವೆ ಎಂದು ಕೇಳಬಹುದು ನಾವು. ಕುತೂಹಲವೇ ಬೇಡವೆನ್ನುವುದು ಜ್ಞಾನವಿರೋಧಿಯಾದ ನಿಲುವಲ್ಲವೆ ಎನ್ನಬಹುದು. ಈ ವಾದವೇನೋ ಸರಿಯಾಗಿದೆ. ಆದರೆ ಕುತೂಹಲ– ಯಾವುದೇ ಕುತೂಹಲ ಬರಿಯ ನೋಟದಿಂದ ತಣಿಯುವುದಿಲ್ಲ. ನಾವೇನನ್ನು ನೋಡಿದೆವು ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳುವ ಆಸೆಯೊಂದು ಪ್ರಬಲವಾಗಿ ಬೆಳೆಯುವುದು. ಅಂದರೆ ಕುತೂಹಲವು ಬರಿಯ ಜ್ಞಾನದ ಕುತೂಹಲ ಮಾತ್ರವಲ್ಲ– ಅದು ನಮ್ಮೊಳಗಿರುವ ಆಕ್ರಾಮಕ ಪ್ರವೃತ್ತಿಯ ಇನ್ನೊಂದು ಮುಖವೂ ಆಗಿದೆ! ವಿಜ್ಞಾನವು ನಡೆದುಬಂದ ದಾರಿಯುದ್ದಕ್ಕೆ ಇದಕ್ಕೆ ದಾಖಲೆಗಳಿವೆ. ಅಣು–ವಿದಳನದಿಂದ ಅಪಾರವಾದ ಶಕ್ತಿಯು ಬಿಡುಗಡೆಯಾಗುತ್ತದೆ ಎಂದು ಸೈದ್ಧಾಂತಿಕವಾಗಿ ತಿಳಿದುಬಂದ ಕೂಡಲೇ, ಇದನ್ನು ಪ್ರಾಯೋಗಿಕವಾಗಿ ಸಾಧಿಸಿಯೇಬಿಡುವ ಕುತೂಹಲವು ದುರ್ದಮ್ಯವಾಗಿ ಬೆಳೆಯಿತು. ಪ್ರಾಯೋಗಿಕವಾಗಿ ಸಾಧಿಸಬೇಕಾದರೆ ಅಪಾರವಾದ ಧನ ಸಹಾಯವು ಬೇಕಾಗಿ, ಸರ್ವಾಧಿಕಾರಿಗಳೋ, ಸರಕಾರಗಳೋ ಮಾತ್ರವೇ ಇದನ್ನು ಸಾಧ್ಯ ಮಾಡಲಾಗಿ, ಸಾಧಿಸಿದವರು ಈ ಅಪಾರವಾದ ಶಕ್ತಿಯನ್ನು ತಮ್ಮ ಸ್ವಾರ್ಥಕ್ಕಾಗಿಯೇ ಬಳಸುವುದು ನಿಶ್ಚಿತವಾಗಿ, ನಮ್ಮ ಜ್ಞಾನದ ಕುತೂಹಲವು ಪ್ರಕೃತಿಯ ಶಕ್ತಿಯನ್ನು ದುಷ್ಟರ ಕೈಗೆ ಒಪ್ಪಿಸುವ ದುರಂತದಲ್ಲಿ ಕೊನೆಯಾದುದಕ್ಕೆ ನಮ್ಮ ಇತಿಹಾಸವೇ ಸಾಕ್ಷಿಯಾಗಿದೆಯಲ್ಲವೆ?

ಬಹು ದೂರದ ಇಂಗ್ಲೆಂಡಿನಿಂದ ಬ್ರಿಟಿಷರು ಭಾರತಕ್ಕೆ ಬಂದುದೇಕೆ? ಇದನ್ನು ಸಾಹಸ ಎನ್ನುವೆವು. ಇದು ಅವರ ಕ್ರಿಯಾಶೀಲತೆಗೆ ಸಾಕ್ಷಿ ಎನ್ನುವೆವು. ಅಷ್ಟು ದೂರದಿಂದ ಇಲ್ಲಿಗೆ ಬಂದು ಇಲ್ಲಿ ಸಾಮ್ರಾಜ್ಯವನ್ನೇ ಕಟ್ಟಿದರು ನೋಡಿ ಎನ್ನುವೆವು. ಸ್ತುತಿಪಾಠಕ ಮಂದಿ ಏನೇ ಹೊಗಳಲಿ; ಇದು ಆಕ್ರಮಣ ಪ್ರವೃತ್ತಿ ಎನ್ನುವುದು ನಿಸ್ಸಂಶಯವಲ್ಲವೆ? ಆಕ್ರಮಣ ಪ್ರವೃತ್ತಿ ಹೊಗಳಲರ್ಹವೆ? ಅರ್ಹ– ಎನ್ನುತ್ತೇವಾದರೆ ನಾವೂ ಅವರಂತೆ ಆಕ್ರಾಮಕರಾಗಬೇಕು ಎಂದಂತೆ. ಅವರೇ ನಮಗೆ ಮಾದರಿ ಎಂದಂತೆ. ಬ್ರಿಟಿಷ್ ಜನ ಕುತೂಹಲದಿಂದ ಇಲ್ಲಿಗೆ ಬಂದರು. ಬಂದ ಅವರನ್ನು ನೋಡಿ ನಾವು ಅವರ ಕುರಿತು ಕುತೂಹಲಗೊಂಡೆವು! ಈ ಕುತೂಹಲವೇ, ಪಶ್ಚಿಮವೇ ನಮ್ಮ ಮಾದರಿಯಾಗಿ ಕಾಣುವುದಕ್ಕೆ ಕಾರಣವಾಯಿತು!

'ಕಣ್ಣಿಗೆ ನಿಷ್ಠವಾದ ವಿಜ್ಞಾನ'ವನ್ನು ಗಾಂಧಿ ಹೇಳಿದರೆ, 'ವಿಜ್ಞಾನಕ್ಕೆ ನಿಷ್ಠವಾದ ಕಣ್ಣ'ನ್ನು ನಾವು ರೂಪಿಸುತ್ತಿದ್ದೇವೆ! ಜಗತ್ತು, ತಲೆ ಕೆಳಗಾದಂತಿದೆ ಎಂದು ತತ್ವಜ್ಞಾನಿಗಳು ಹೇಳಿರುವುದು ಸುಮ್ಮನೆ ಅಲ್ಲ!

■ **ತೋಷ**

## ಮಾತೇ ಮುತ್ತು

★ ವ್ಯಕ್ತಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳಿದರೆ ಅದು ಆತನ ತಲೆಗೆ ಹೋಗುತ್ತದೆ. ಅದನ್ನೇ ಆತನ ಮಾತೃಭಾಷೆಯಲ್ಲಿ ಹೇಳಿದರೆ ಹೃದಯಕ್ಕೆ ಹೋಗುತ್ತದೆ.

–ನೆಲ್ಸನ್ ಮಂಡೇಲ

★ ಮನುಷ್ಯನಿಗೆ ಯಾವುದು ಗೊತ್ತಿಲ್ಲವೋ ಅದನ್ನು ತಿಳಿಸುವುದು ವಿದ್ಯಾಭ್ಯಾಸದ ಗುರಿಯಲ್ಲ. ಹೇಗೆ ವರ್ತಿಸಬೇಕೆಂದು ತಿಳಿಸುವುದೇ ವಿದ್ಯಾಭ್ಯಾಸದ ಗುರಿ

–ಜಾನ್ ರಸ್ಕಿನ್

★ ಎಲ್ಲರ ಆಸೆಗಳನ್ನೂ ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ, ಎಲ್ಲರ ದುರಾಸೆಗಳನ್ನಲ್ಲ.

ಮಹಾತ್ಮ ಗಾಂಧೀಜಿ

★ ಸೋಲು ಎಂಬುದು ಮತ್ತೊಮ್ಮೆ ಹೆಚ್ಚು ಚೈತನ್ಯದಿಂದ ಯತ್ನಿಸಲು ನೀಡಲ್ಪಡುವ ಒಂದು ಅವಕಾಶ.

–ಸುಭಾಷಿತ

★ ನಿದ್ದೆಯಲ್ಲಿ ಕಾಣುವಂತದ್ದು ಕನಸಲ್ಲ, ನಿದ್ದೆ ಗೆಡುವಂತೆ ಮಾಡುವುದಿದೆಯಲ್ಲ ಅದು ನಿಜವಾದ ಕನಸು.

–ಡಾ. ಎ.ಪಿ.ಜೆ ಅಬ್ದುಲ್ ಕಲಾಂ.

★ ಯಾರು ಅತ್ಯಂತ ಮೂಢರೋ, ಯಾರು ಅತ್ಯಂತ ಬುದ್ಧಿಶಾಲಿಗಳೋ ಅವರೇ ಸುಖವಾಗಿರುವವರು. ಮಧ್ಯಮ ವರ್ಗದವರು ಕ್ಲೇಶ ಪಡುತ್ತಾರೆ.

ರಾಮಾಯಣ